# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ

## ಉತ್ತರ ಕನ್ನಡ : ಕಾರವಾರ

### ಎಸ್.ಸಿ. ನಂ. 36/2014

**ದೋ.ಸಾ. : 37 ಪ್ರಾ.ಸಾ. : 41**

| | | |
|---|---|---|
| ಸಾಕ್ಷಿಯ ಹೆಸರು | : | ಡಾ. ಕಿರಣ ರೇವಣಕರ |
| ತಂದೆಯ ಹೆಸರು | : | ದತ್ತಾತ್ರೇಯ ರೇವಣಕರ |
| ವಯಸ್ಸು | : | 55 ವರ್ಷ |
| ಕೆಲಸ | : | ಇ.ಎನ್.ಟಿ., ತಜ್ಞರು, ಹಳಿಯಾಳ ತಾಲೂಕ ಆಸ್ಪತ್ರೆ |
| ವಾಸ | : | ಹಳಿಯಾಳ |

**ದಿನಾಂಕಃ 17-02-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ-**

1. ನಾನು 2005 ರಿಂದ 2025 ರವರೆಗೆ ಕಾರವಾರದ ಜಿಲ್ಲಾ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿಯಾಗಿ ಕೆಲಸ ಮಾಡಿರುತ್ತೇನೆ. ದಿ.15-02-2014 ರಂದು ನಾನು ಕರ್ತವ್ಯದಲ್ಲಿದ್ದಾಗ, ಮಧ್ಯರಾತ್ರಿ ಸುಮಾರು 1.30 ಗಂಟೆಗೆ ಕದ್ರಾ ಠಾಣೆಯ ಪೊಲೀಸ್ ಸಿಬ್ಬಂದಿಯಾದ ಚಾಸಾ-50 ಮತ್ತು 51 ರವರು ಗಾಯಾಳು ಚಾಸಾ-22 ಜಾನಕಿ ರವರನ್ನು ಹಲ್ಲೆಯ ಹಿನ್ನೆಲೆಯಲ್ಲಿ ಚಿಕಿತ್ಸೆಗಾಗಿ ಕರೆದುಕೊಂಡು ಬಂದಿದ್ದು, ಅವರನ್ನು ಪರೀಕ್ಷಿಸಿದಾಗ, ಈ ಕೆಳಗೆ ನಮೂದಿಸಿರುವಂತೆ ಗಾಯಗಳು ಕಂಡುಬಂದಿರುತ್ತವೆ.

1. ಎಡ ಹಣೆಯ ಮೇಲೆ 10 X 4 X 3 ಸೆಂ.ಮೀ. ಅಳತೆಯ ಕತ್ತರಿಸಿದ ಗಾಯ,
2. ಎಡಕಿವಿಯ ಮೇಲೆ 7 X 4 X 3 ಸೆಂ.ಮೀ. ಅಳತೆಯ ಕತ್ತರಿಸಿದ ಗಾಯ,
3. ಎಡ ಮುಂಗೈಯನ್ನು ಹರಿತವಾದ ಆಯುಧದಿಂದ ಕತ್ತರಿಸಲಾಗಿತ್ತು.

ನಂತರ ನಾನು ಚಾಸಾ-22 ರವರಿಗೆ ಪ್ರಾಥಮಿಕ ಚಿಕಿತ್ಸೆ ನೀಡಿ, ಹೆಚ್ಚಿನ ಚಿಕಿತ್ಸೆಗಾಗಿ ಅವರನ್ನು ಗೋವಾ ಮೆಡಿಕಲ್ ಕಾಲೇಜ್ / ಆಸ್ಪತ್ರೆಗೆ ಕರೆದುಕೊಂಡು ಹೋಗುವಂತೆ ಸೂಚಿಸಿರುತ್ತೇನೆ.

2. ಆನಂತರ ದಿ.11-04-2014 ರಂದು ಪೊಲೀಸರು ಗೋವಾ ಮೆಡಿಕಲ್ ಕಾಲೇಜ್ / ಆಸ್ಪತ್ರೆಯಿಂದ ಚಾಸಾ-22 ರವರ ಡಿಸ್ಚಾರ್ಜ್ ಸಮ್ಮರಿಯನ್ನು ತಂದು ಹಾಜರುಪಡಿಸಿ, ಚಾಸಾ-22 ರವರ ಗಾಯದ ಪ್ರಮಾಣ ಪತ್ರವನ್ನು ನೀಡುವಂತೆ ಕೋರಿಕೊಂಡಿರುತ್ತಾರೆ. ಸದರಿ ಡಿಸ್ಚಾರ್ಜ್ ಸಮ್ಮರಿಯನ್ನು ಪರಿಶೀಲಿಸಿದಾಗ, ಚಾಸಾ-22 ರವರನ್ನು ದಿ.15-02-2014 ರಂದು ಸದರಿ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಆನಂತರ ದಿ.22-02-2014 ರಂದು ಡಿಸ್ಚಾರ್ಜ್ ಮಾಡಿರುವುದು ಕಂಡುಬಂದಿರುತ್ತದೆ. ಆನಂತರ ನಾನು ನಮ್ಮ ಆಸ್ಪತ್ರೆಯಲ್ಲಿ ಚಾಸಾ-22 ರವರಿಗೆ ಚಿಕಿತ್ಸೆ ನೀಡಿದ ಬಗ್ಗೆ ದಾಖಲೆಗಳನ್ನು ಹಾಗೂ ಗೋವಾ ಮೆಡಿಕಲ್ ಕಾಲೇಜಿನ ಡಿಸ್ಚಾರ್ಜ್ ಸಮ್ಮರಿಯನ್ನು ಪರಿಶೀಲಿಸಿ, ಚಾಸಾ-22 ರವರ ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ. ನಾನು ನೀಡಿದ ಗಾಯದ ಪ್ರಮಾಣ ಪತ್ರದ ಅನುಸಾರ, ಚಾಸಾ-22 ರವರಿಗೆ ಆದಂತಹ ಎಲ್ಲಾ ಗಾಯಗಳು ತೀವ್ರ ಸ್ವರೂಪದ ಗಾಯಗಳಾಗಿರುತ್ತದೆ. ಸಾಕ್ಷಿಯು ತಾನು ನೀಡಿದ ಗಾಯದ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-93 ಎಂದು, ಸಾಕ್ಷಿಯ ಸಹಿಯನ್ನು ನಿಪಿ-93(ಎ) ಎಂದು ಗುರುತಿಸಲಾಯಿತು.

3. ನಂತರ ದಿ.17-05-2014 ರಂದು ಚಾಸಾ-51 ರವರು ಮಂಗಳೂರಿನ ಎಫ್.ಎಸ್.ಎಲ್. ನಿಂದ ಬಂದಂತಹ ಕತ್ತಿಯನ್ನು ಕೋರಿಕೆ ಪತ್ರದೊಂದಿಗೆ ತಂದು ಹಾಜರುಪಡಿಸಿದ್ದು, ಸದರಿ ಕೋರಿಕೆ ಪತ್ರದಲ್ಲಿ ನಿಪಿ-91 ಗಾಯದ ಪತ್ರದಲ್ಲಿ ನಮೂದಿಸಿರುವ ಗಾಯಗಳು ಸದರಿ ಕತ್ತಿಯಿಂದ ಹೊಡೆದಾಗ ಆಗುವ ಸಾಧ್ಯತೆಯಿದೆಯಾ ಎಂದು ಅಭಿಪ್ರಾಯ ಕೋರಿದ್ದು, ಅದರಂತೆ ನಾನು ಸದರಿ ಕತ್ತಿಯನ್ನು ಪರಿಶೀಲಿಸಿ, ಅದನ್ನು ಅಳತೆ ಮಾಡಿರುತ್ತೇನೆ ಹಾಗೂ ಗಾಯದ ಪ್ರಮಾಣ ಪತ್ರದಲ್ಲಿ ನಮೂದಿಸಿರುವ ಗಾಯಗಳು ಸದರಿ ಕತ್ತಿಯಿಂದ ಹೊಡೆದಾಗ ಆಗುವ ಸಾಧ್ಯತೆ ಇದೆ ಎಂದು ಅಭಿಪ್ರಾಯ ವರದಿಯನ್ನು ಕತ್ತಿಯ ಚಿತ್ರದೊಂದಿಗೆ ನೀಡಿರುತ್ತೇನೆ. ಆನಂತರ ನಾನು ಪರಿಶೀಲಿಸಿದ ಕತ್ತಿಯನ್ನು ಪುನಃ ಚೀಲದಲ್ಲಿ ಹಾಕಿ, ಸೀಲ್ ಮಾಡಿ, ಪೊಲೀಸರಿಗೆ ನೀಡಿರುತ್ತೇನೆ. ಪೊಲೀಸರಿಂದ ಬಂದ ಕೋರಿಕೆ ಪತ್ರವನ್ನು ಈಗಾಗಲೇ ನಿಪಿ-73 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-73(ಎ) ಎಂದು ಗುರುತಿಸಲಾಗಿದೆ. ಸಾಕ್ಷಿಯ ತಾನು ನೀಡಿದ ಅಭಿಪ್ರಾಯ ವರದಿಯನ್ನು ಹಾಗೂ ಕತ್ತಿಯ ಚಿತ್ರವನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ-94 ಮತ್ತು ನಿಪಿ-95 ಎಂದು, ಅವುಗಳಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-94(ಎ) ಮತ್ತು 95(ಎ) ಎಂದು

ಗುರತಿಸಲಾಯಿತು. ಈಗ ನ್ಯಾಯಾಲಯದ ಮುಂದಿರುವ ಎಂ.ಓ–26 ಕತ್ತಿಯನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎ.ಎ.ಎ. ವಕೀಲರಿಂದಃ–**

4. ನಿಪಿ–93 ರಲ್ಲಿ ಗಾಯಾಳುವಿನ ಮಾಹಿತಿಯನ್ನು ಗಾಯಾಳು ಚಾಸಾ–22 ರವರು ಹಾಗೂ ಅವರನ್ನು ಕರೆದುಕೊಂಡು ಬಂದ ಚಾಸಾ–50 ಮತ್ತು 51 ರವರು ನೀಡಿರುತ್ತಾರೆ. ಆದರೆ ಆ ಸಮಯದಲ್ಲಿ ಗಾಯಾಳು ಚಾಸಾ–22 ರವರು ತನಗೆ ಆದ ಗಾಯಗಳಿಂದಾಗಿ ಆಘಾತಗೊಂಡಿದ್ದಳು. ಚಾಸಾ–22 ರವರು ಯಾವ ಮಾಹಿತಿಯನ್ನು ನೀಡಿದ್ದರು ಎಂದು ಈಗ ನನಗೆ ನೆನಪಿಲ್ಲ. ನಿಪಿ–93 ಗಾಯದ ಪ್ರಮಾಣ ಪತ್ರದಲ್ಲಿ ನಮೂದಿಸಿರುವ 1 ಮತ್ತು 2 ನೇ ಗಾಯಗಳು ಒಂದೇ ಆಯುಧದಿಂದಲೂ ಆಗಬಹುದು, ಅಥವಾ ಎರಡು ಆಯುಧಗಳಿಂದಲೂ ಆಗಬಹುದು. ನಿಪಿ–93 ಗಾಯದ ಪ್ರಮಾಣ ಪತ್ರದಲ್ಲಿ ನಮೂದಿಸಿರುವ ಗಾಯಗಳು ಕಡಗ ಅಥವಾ ಕೊಡಲಿಯಿಂದ ಆಗುವ ಸಾಧ್ಯತೆ ಇರುತ್ತದೆ. ಎಂ.ಓ–26 ಕತ್ತಿಯ ಮೇಲೆ ಅಥವಾ ಅದರ ಚೀಲದ ಮೇಲೆ ನನ್ನ ಸಹಿ ಇರುವುದಿಲ್ಲ. ನಿಪಿ–95 ಕತ್ತಿಯ ಚಿತ್ರವು ಜೆರಾಕ್ಸ್ ಪ್ರತಿಯಾಗಿರುತ್ತದೆ ಎಂದರೆ ಸರಿ. ಸದರಿ ದಾಖಲೆಯನ್ನು ಪೊಲೀಸರು ತಂದಿರುತ್ತಾರೆ. ನನ್ನ ಸಮಕ್ಷಮ ಯಾವುದೇ ಕತ್ತಿಯನ್ನು ಹಾಜರುಪಡಿಸಿಲ್ಲ, ಹಾಗೂ ಯಾವುದೇ ಕತ್ತಿಯನ್ನು ನಾನು ಪರಿಶೀಲಿಸಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

Sd/-

(ಮಾಯಣ್ಣ ಬಿ.ಎಲ್.)

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಉತ್ತರಕನ್ನಡ, ಕಾರವಾರ